BOOK-POST

# SRI SHARADAMBA MAHA RATHOTSAVA

*10th February, 2012*

*Sri Sri Jagadguru Shankaracharya Mahasamsthanam*
*Dakshinamnaya Sri Sharada Peetam, Sringeri*
Ph : 08265-250123, 250192 Fax : 08265-250792
www.sringerisharadapeetham.org
Email : info@sringerisharadapeetham.org

# ಶ್ರೀ ಶಾರದಾಮಹಾರಥೋತ್ಸವಾಹ್ವಾನಪತ್ರಿಕೆ

**10.02.2012**



मनः पूर्वकं ये रथं भूषयन्तीं गिरां देवि पश्यन्ति मोदादिह त्वाम् ।

मनः पूर्वकं ते रथं यत्नशून्याः द्रुतं प्राप्नुवन्त्येव कारुण्यपूर्णे ॥

ಶ್ರೀ ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನಂ

ದಕ್ಷಿಣಾಮ್ನಾಯ ಶ್ರೀ ಶಾರದಾಪೀಠಂ, ಶೃಂಗೇರಿ

# ಕಾರ್ಯಕ್ರಮಗಳು

ಮಾಘ ಶುಕ್ಲ ಚತುರ್ದಶಿ – ಸೋಮವಾರ ದಿನಾಂಕ 06.02.2012

ಶ್ರೀ ಶ್ರೀ ಗಳವರಿಂದ ಅನುಜ್ಞೆ ಪಡೆದು ರಥೋತ್ಸವಕ್ಕಾಗಿ ಗಣಪತಿ ಪೂಜೆ

ಮಾಘ ಶುಕ್ಲ ಹುಣ್ಣಿಮೆ – ಮಂಗಳವಾರ ದಿನಾಂಕ 07.02.2012

ಶ್ರೀ ಶಾರದಾಂಬಾ ದೇವಾಲಯದಲ್ಲಿ ಧ್ವಜಾರೋಹಣ
ಶತಚಂಡೀ ಮಹಾಯಾಗದ ಸಂಕಲ್ಪ- ಚಂಡೀಪುರಶ್ಚರಣೆ

ಮಾಘ ಕೃಷ್ಣ ಪ್ರತಿಪತ್- ಬುಧವಾರ ದಿನಾಂಕ 08.02.2012

ಚಂಡೀಪುರಶ್ಚರಣೆ-ರಥೋತ್ಸವಾಂಗ ಹೋಮಗಳು-ಸಂಜೆ ಬೀದಿ ಉತ್ಸವ

ಮಾಘ ಕೃಷ್ಣ ದ್ವಿತೀಯಾ-ಗುರುವಾರ ದಿನಾಂಕ 09.02.2012

ಚಂಡೀಪುರಶ್ಚರಣೆ-ರಥೋತ್ಸವಾಂಗ ಹೋಮಗಳು-
ಶ್ರೀ ಶ್ರೀ ಜಗದ್ಗುರು ಮಹಾಸ್ವಾಮಿಗಳವರಿಂದ ಶ್ರೀ ಶಾರದಾಮ್ಮನವರಿಗೆ
ಮಧ್ಯಾಹ್ನ 12 ರಿಂದ 2 ರವರೆಗೆ ವಿಶೇಷ ಪೂಜೆ, ಸಂಜೆ ಬೀದಿ ಉತ್ಸವ

ಮಾಘ ಕೃಷ್ಣ ತೃತೀಯಾ-ಶುಕ್ರವಾರ ದಿನಾಂಕ 10.02.2012

ಚಂಡೀಪುರಶ್ಚರಣೆ-11 ಘಂಟೆಗೆ ಶ್ರೀ ಶ್ರೀ ಜಗದ್ಗುರು
ಮಹಾಸ್ವಾಮಿಗಳವರ ದಿವ್ಯ ಉಪಸ್ಥಿತಿಯಲ್ಲಿ ಮಹಾರಥೋತ್ಸವ

ಮಾಘ ಕೃಷ್ಣ ಚತುರ್ಥಿ –ಶನಿವಾರ ದಿನಾಂಕ 11.02.2012

ಮಧ್ಯಾಹ್ನ 12 ಕ್ಕೆ ಶತಚಂಡೀ ಮಹಾಯಾಗದ ಪೂರ್ಣಾಹುತಿ
ರಥೋತ್ಸವಾಂಗ ಅವಭೃಥ, ಸಂಜೆ 6–30 ಕ್ಕೆ ತುಂಗಾ ನದಿಯಲ್ಲಿ
ಅಮ್ಮನವರಿಗೆ ತೆಪ್ಪೋತ್ಸವ ನಂತರ ಬೀದಿ ಉತ್ಸವ

ಶ್ರೀ ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನಂ
ದಕ್ಷಿಣಾಮ್ನಾಯ ಶ್ರೀ ಶಾರದಾಪೀಠಂ, ಶೃಂಗೇರಿ

ಶ್ರೀಃ

ಮನಃ ಪೂರ್ವಕಂ ಯೇ ರಥಂ ಭೂಷಯಂತೀಂ
ಗಿರಾಂ ದೇವಿ ಪಶ್ಯಂತಿ ಮೋದಾದಿಹ ತ್ವಾಮ್ ।
ಮನಃ ಪೂರ್ವಕಂ ತೇ ರಥಂ ಯತ್ನಶೂನ್ಯಾಃ
ದ್ರುತಂ ಪ್ರಾಪ್ನುವಂತ್ಯೇವ ಕಾರುಣ್ಯಪೂರ್ಣೇ ॥

## ಶ್ರೀ ಶಾರದಾಮಹಾರಥೋತ್ಸವಾಹ್ವಾನಪತ್ರಿಕೆ

ಶೃಂಗೇರಿ ಜಗದ್ಗುರು ಮಹಾಸಂಸ್ಥಾನದಲ್ಲಿ ಆರಾಧ್ಯದೇವತೆಯಾದ ಶ್ರೀ ಶಾರದಾಮ್ಮನವರಿಗೆ ನಡೆಯತಕ್ಕ ಉತ್ಸವಗಳಲ್ಲಿ ಮಹಾರಥೋತ್ಸವವು ಅತ್ಯಂತ ಮಹತ್ವದ್ದಾಗಿರುತ್ತದೆ. ಅನೇಕ ಶತಮಾನಗಳಿಂದ ತಪ್ಪದೇ ನಡೆಯುತ್ತಿರುವ ಈ ಉತ್ಸವವನ್ನು ಶ್ರೀ ಶ್ರೀ ಜಗದ್ಗುರು ಮಹಾಸ್ವಾಮಿಗಳವರು ಬಹಳ ವೈಭವದಿಂದ ನಡೆಸುತ್ತಿರುವುದು ಸರ್ವವಿದಿತವಾಗಿದೆ. ಪ್ರತಿವರ್ಷವೂ ಮಾಘ ಕೃಷ್ಣ ತದಿಗೆಯಂದು ಈ ಉತ್ಸವವು ನಡೆಯುತ್ತಿದ್ದು ಭಕ್ತ ಜನರಿಗೆ ಅತೀವ ಮೋದದಾಯಕವಾಗಿರುತ್ತದೆ. ಪಂಚಾಹ್ನಿಕದೀಕ್ಷೆಯಿಂದ ಆಗಮೋಕ್ತ ವಿಧಾನದಂತೆ ನಡೆಯುವ ಈ ಉತ್ಸವವು ಇದೇ ಶ್ರೀ ಖರ ಸಂವತ್ಸರ ಮಾಘ ಪೂರ್ಣಿಮೆಯಿಂದ ಕೃಷ್ಣ ಚತುರ್ಥಿ ಪರ್ಯಂತ (ದಿನಾಂಕ 06.02.2012 ರಿಂದ 11.02.2012 ರವರೆಗೆ) ಕೆಳಕಂಡ ಕಾರ್ಯಕ್ರಮದಂತೆ ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರ ಪರಮಾನುಗ್ರಹದಿಂದ ಅವರ ದಿವ್ಯ ಸಾನ್ನಿಧ್ಯದಲ್ಲಿ ನಡೆಯಲಿದೆ. ಶ್ರೀ ಶ್ರೀ ಜಗದ್ಗುರು ಮಹಾಸ್ವಾಮಿಗಳವರ ಆದೇಶದಂತೆ ಆ ಸಂದರ್ಭದಲ್ಲಿ ಲೋಕಕ್ಷೇಮಕ್ಕಾಗಿ ಶತಚಂಡೀ ಮಹಾಯಾಗವನ್ನು ನಡೆಸಲು ಏರ್ಪಾಟಾಗಿದೆ. ಸಕಲ ಆಸ್ತಿಕ ಭಕ್ತವರೇಣ್ಯರು ಸುಕೃತೈಕಲಭ್ಯವಾದ ಈ ಮಹೋತ್ಸವದಲ್ಲಿ ಭಾಗವಹಿಸಿ ಶ್ರೀ ಶಾರದಾಮ್ಮನವರ ಹಾಗೂ ಶ್ರೀ ಶ್ರೀ ಜಗದ್ಗುರು ಮಹಾಸ್ವಾಮಿಗಳವರ ಪರಿಪೂರ್ಣಕೃಪೆಗೆ ಪಾತ್ರರಾಗಬೇಕಾಗಿ ಕೋರುತ್ತೇವೆ.

ಇಂತು

ಶೃಂಗೇರಿ
25.01.2012

ಗುರುಸೇವಾಧುರೀಣ
ಪದ್ಮಶ್ರೀ ಡಾ. ವಿ.ಆರ್. ಗೌರೀಶಂಕರ್


LODGE
ATM
RELIANCE
Mobile